3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ,ರವರ ನ್ಯಾಯಾಲಯ, ಕಡೂರು.

**ಸಿ.ಸಿ. ಸಂಖ್ಯೆ: 976/2019**

ಫಿರ್ಯಾದುದಾರರು:- ಶೇಖರ್ ಚಂದ್ ಸಂಚೇತಿ ಬಿನ್ ಭವರ್ ಲಾಲ್ , 43 ವರ್ಷ, ವ್ಯಾಪಾರ, ವಾಸ: ಲಕ್ಷ್ಮೀಶ ನಗರ, ಕಡೂರು ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ.

-ವಿರುದ್ಧ-

ಆರೋಪಿತ:- ಶ್ರೀಮತಿ ನಗೀನ ಕೋಂ ಮೊಹಮ್ಮದ್ ?ಇಸ್ಮಾಯಿಲ್, , 30 ವರ್ಷ, ಮನೆಕೆಲಸ, ವಾಸ-ಕೆ.ಎಂ. ರಸ್ತೆ, ಸುಭಾಷ್ ? ನಗರ, ಕಡೂರು ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ.

<u>ದಂಡ ಪ್ರಕ್ರಿಯಾ ಸಂಹಿತೆ ಕಲಂ **313** ರ ಪ್ರಕಾರ ಆರೋಪಿಯ ಹೇಳಿಕೆ</u>

ಪ್ರ:1) ಈ ಕೇಸಿನಲ್ಲಿ ಫಿರ್ಯಾದುದಾರರು ಹೇಳಿದ ಸಾಕ್ಷ್ಯವನ್ನು ಕೇಳಿ ತಿಳಿದುಕೊಂಡಿದ್ದೀರಾ?

ಉ:- ಹೌದು.

ಪ್ರ:2) ಫ್ರಾ.ಸಾ-**1** ಶೇಖರ್ ಚಂದ್ ಸಂಚೇತಿ ರವರು ತಮ್ಮ ಸಾಕ್ಷ್ಯದಲ್ಲಿ ಆರೋಪಿಯಾದ ನೀವು ಅವರಿಗೆ ಪರಿಚಿತರಾಗಿರುತ್ತೀರಿ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಅದಕ್ಕೆ ನೀವೇನು ಹೇಳುತ್ತೀರಿ?

ಉ:- ಸುಳ್ಳು

ಪ್ರ:3) ಫ್ರಾ.ಸಾ-**1** ತಮ್ಮ ಮುಂದುವರಿದ ಸಾಕ್ಷ್ಯದಲ್ಲಿ ನೀವು ನಿಮ್ಮ ತುರ್ತು ಅವಶ್ಯಕತೆಗಾಗಿ ಹಾಗೂ ಕೈಸಾಲವನ್ನು ತೀರಿಸುವುದಕ್ಕಾಗಿ ಅವರಿಂದ ರೂ.2,50,000/- ಹಣವನ್ನು ದಿನಾಂಕ **20.09.2018** ರಂದು ಸಾಲವಾಗಿ ಪಡೆದಿರುತ್ತೀರಿ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಅದಕ್ಕೆ ನೀವೇನು ಹೇಳುತ್ತೀರಿ?

ಉ:- ಸುಳ್ಳು

ಪ್ರ:4) ಫ್ರಾ.ಸಾ-**1** ರವರು ತಮ್ಮ ಮುಂದುವರಿದ ಸಾಕ್ಷ್ಯದಲ್ಲಿ ಸದರಿ ಸಾಲದ ಹಣದ ಮರುಪಾವತಿಗಾಗಿ ನೀವು ಕಾರ್ಪೋರೇಷನ್ ಬ್ಯಾಂಕ್, ಕಡೂರು ಶಾಖೆಯ ಚೆಕ್ ಸಂಖ್ಯೆ **262088** ನ್ನು ರೂ.2,50,000/- ಗಳಿಗೆ ದಿನಾಂಕ 27-09-2018 ರಂದು ನೀಡಿರುತ್ತೀರಿ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಅದಕ್ಕೆ ನೀವೇನು ಹೇಳುತ್ತೀರಿ?

ಉ:- ಸುಳ್ಳು

ಪ್ರಃ5) ಫಿರ್ಯಾದಿ-1 ರವರು ತಮ್ಮ ಮುಂದುವರಿದ ಸಾಕ್ಷ್ಯದಲ್ಲಿ ಸದರಿ ಚೆಕ್ಕನ್ನು ಅವರು ಇಂಡಿಯನ್ ಓವರ್ ಸೀಸ್ ಬ್ಯಾಂಕ್, ಕಡೂರು ಶಾಖೆಗೆ ನಗದೀಕರಣಕ್ಕಾಗಿ ಹಾಜರುಪಡಿಸಿದಾಗ **Funds Insufficient/signature differs** ಎಂಬ ಕಾರಣಕ್ಕೆ ಸದರಿ ಚೆಕ್ ಅಮಾನ್ಯಗೊಂಡು ಬ್ಯಾಂಕಿನ ಹಿಂಬರಹದೊಂದಿಗೆ ವಾಪಾಸ್ಸಾಗಿರುವುದಾಗಿ ಸಾಕ್ಷ್ಯನುಡಿದಿರುತ್ತಾರೆ. ಅದಕ್ಕೆ ನೀವೇನು ಹೇಳುತ್ತೀರಿ?

ಉಃ- ಸುಳ್ಳು

ಪ್ರಃ6) ಸದರಿ ಸಾಕ್ಷಿದಾರರು ತಮ್ಮ ಮುಂದುವರಿದ ಸಾಕ್ಷ್ಯದಲ್ಲಿ ಚೆಕ್ ಅಮಾನ್ಯಗೊಂಡ ನಂತರ ಅವರು ತಮ್ಮ ವಕೀಲರ ಮೂಲಕ ದಿನಾಂಕ 11-10-2018 ರಂದು ನೀವು ನೋಟೀಸನ್ನು ನೀಡಿದ್ದು, ಸದರಿ ನೋಟೀಸು ನಿಮಗೆ ದಿನಾಂಕ 11-10-2018 ರಂದು ಜಾರಿಯಾಗಿದ್ದರೂ ಸಹ ನೀವು ನಿಗದಿತ ಕಾಲಾವಕಾಶದ ಒಳಗೆ ಯಾವುದೇ ಹಣವನ್ನು ನೀಡಿರುವುದಿಲ್ಲ ಎಂದು ಸಾಕ್ಷ್ಯನುಡಿದಿರುತ್ತಾರೆ. ಅದಕ್ಕೆ ನೀವೇನು ಹೇಳುತ್ತೀರಿ?

ಉಃ- ಸುಳ್ಳು

ಪ್ರಃ7) ಸದರಿ ಸಾಕ್ಷಿದಾರರು ತಮ್ಮ ಮುಂದುವರಿದ ಸಾಕ್ಷ್ಯದಲ್ಲಿ ನೀವು ನೀಡಿದ ಚೆಕ್, ಬ್ಯಾಂಕಿನವರು ನೀಡಿರುವ ಹಿಂಬರಹ, ವಕೀಲರ ಮೂಲಕ ನೀಡಿದ ನೋಟೀಸಿನ ಪ್ರತಿ, ಅಂಚೆ ರಶೀದಿ ಮತ್ತು ಅಂಚೆ ಸ್ವೀಕೃತಿಯನ್ನು ನಿಪಿ-1 ರಿಂದ ನಿಪಿ-5 ಎಂದು ಗುರುತಿಸಿಕೊಂಡಿರುತ್ತಾರೆ. ಅದಕ್ಕೆ ನೀವೇನು ಹೇಳುತ್ತೀರಿ?

ಉಃ- ಸುಳ್ಳು

ಪ್ರಶ್ನೆ-8 ನಿಮಗೆ ಈ ಕೇಸಿನ ಬಗ್ಗೆ ಮತ್ತೆ ಏನಾದರೂ ಹೇಳುವುದು ಇದೆಯೇ ಅಥವಾ ಲಿಖಿತವಾಗಿ ಹೇಳಿಕೆ ನೀಡುವುದೇನಾದರೂ ಇದೆಯೇ?

ಉತ್ತರಃ ಇಲ್ಲ.

ಪ್ರಶ್ನೆ-9 ಃ ನಿಮ್ಮ ಪರವಾಗಿ ಸಾಕ್ಷಿ ವಿಚಾರಣೆ ಇದೆಯೇ?

ಉತ್ತರಃ ಇಲ್ಲ.

(ಈ ಮೇಲ್ಕಂಡ ಹೇಳಿಕೆಯನ್ನು ಆರೋಪಿಗೆ ಓದಿ ಹೇಳಿ ಆತನು ಕೊಟ್ಟ ಉತ್ತರವನ್ನು ಯಥವತ್ತಾಗಿ ಬರೆದುಕೊಂಡಿದ್ದೇನೆಂದು ಈ ಮೂಲಕ ದೃಢೀಕರಿಸಿದ್ದೇನೆ.)

ದಿನಾಂಕಃ 12.11.2021

ಸಹಿ/-
(ದೀಪು ಎಂ.ಟಿ.)
3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ., ಕಡೂರು.